AXIS BANK

CASA-BYOD-AOF-for-Electronically-Source-Accounts TnC

ಅತಿ ಪ್ರಮುಖ ನಿಯಮಗಳು ಮತ್ತು ನಿಬಂಧನೆಗಳು (ಗ್ರಾಹಕರ ಪ್ರತಿ)

ನಾನು (ಈ ಸಂದರ್ಭದಲ್ಲಿ, "ನಾನು", "ನನ್ನ" ಮತ್ತು "ನನಗೆ" ಎಂದರೆ ಖಾತೆಯನ್ನು ಹೊಂದಿರುವ ಎಲ್ಲರೂ ಎಂದರ್ಥ) ಈ ಕೆಳಗಿನ ನಿಯಮಗಳು ಮತ್ತು ಷರತ್ತುಗಳನ್ನು ಓದಿದ್ದೇನೆ ಮತ್ತು ಅರ್ಥಮಾಡಿಕೊಂಡಿದ್ದೇನೆ ಹಾಗೂ ನಿಯಮಗಳು ಮತ್ತು ಷರತ್ತುಗಳಿಗೆ ಮಾಡಿರುವ ಯಾವುದೇ ಬದಲಾವಣೆಗಳು www.axisbank.com ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತವೆ ಎಂದು ಅರ್ಥಮಾಡಿಕೊಂಡಿದ್ದೇನೆ.

ಎಲೆಕ್ಟ್ರಾನಿಕ್ ನಮೂನೆ ಭರ್ತಿಮಾಡುವುದು: ಟ್ಯಾಬ್ಲೆಟ್‌ಗಳನ್ನು ಬಳಸಿಕೊಂಡು ಎಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ನಾನು/ನಾವು ಈ ಮೂಲಕ ದೃಢೀಕರಿಸುತ್ತೇನೆ/ವೆ ಮತ್ತು ಉದ್ಯೋಗಿ/ಪ್ರತಿನಿಧಿ ID ________________ ಅನ್ನು ಹೊಂದಿರುವ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನ ಉದ್ಯೋಗಿ/ಪ್ರತಿನಿಧಿಯಾದ ______________________ ಅವರಿಗೆ ನನ್ನ/ನಮ್ಮ ಪರವಾಗಿ ಮತ್ತು ನಾನು ನೀಡಿದ ಸೂಚನೆಗಳ ಪ್ರಕಾರ ಎಲೆಕ್ಟ್ರಾನಿಕ್ ಅರ್ಜಿ ನಮೂನೆಯಲ್ಲಿ ಖಾತೆಯನ್ನು ತೆರೆಯುವ ವಿವರಗಳನ್ನು ನಮೂದಿಸಲು ಅಧಿಕಾರ ನೀಡುತ್ತೇನೆ/ವೆ. ಎಲೆಕ್ಟ್ರಾನಿಕ್ ಅರ್ಜಿ ನಮೂನೆಯಲ್ಲಿ ಅವರು ನಮೂದಿಸಿದ ವಿವರಗಳನ್ನು ನಾನು/ನಾವು ವಿಮರ್ಶಿಸಿದ್ದೇನೆ/ವೆ ಮತ್ತು ಪರಿಶೀಲಿಸಿದ್ದೇನೆ/ವೆ ಹಾಗೂ ಅವು ನಿಜವಾಗಿವೆ, ಸರಿಯಾಗಿವೆ ಮತ್ತು ಹೊಸದಾಗಿವೆ ಮತ್ತು ನಾನು ಅರ್ಜಿಯ ವಿವರಗಳನ್ನು ವಿಮರ್ಶೆ, ಪರಿಶೀಲನೆ ಮತ್ತು ದೃಢೀಕರಣ ಮಾಡಿದ ಮೇಲಷ್ಟೇ ಎಲೆಕ್ಟ್ರಾನಿಕ್ ಅರ್ಜಿ ನಮೂನೆಗೆ ಸಂಬಂಧಿಸಿದಂತೆ ಮೇಲೆ ತಿಳಿಸಲಾದ ಉಲ್ಲೇಖ ಸಂಖ್ಯೆಯನ್ನು ರಚಿಸಲಾಗಿದೆ ಎಂದು ದೃಢೀಕರಿಸಿದ್ದೇನೆ/ವೆ. ಎಲೆಕ್ಟ್ರಾನಿಕ್ ಅರ್ಜಿ ನಮೂನೆ ಮತ್ತು ಭೌತಿಕ ಅರ್ಜಿ ನಮೂನೆಗಳೆರಡೂ ಸೇರಿ, ಮೇಲೆ ತಿಳಿಸಿದ ಅರ್ಜಿ ಸಂಖ್ಯೆಗೆ ಖಾತೆ ತೆರೆಯುವ ದಾಖಲೆಗಳನ್ನು ರೂಪಿಸುತ್ತವೆ.

**ಖಾತೆ ತೆರೆಯುವಿಕೆ/ಸೇವಾ ನಿಬಂಧನೆ:** ಖಾತೆಯನ್ನು ತೆರೆಯುವುದು ಸೇರಿದಂತೆ ಎಲ್ಲ ಸೇವೆಗಳು ನಾನು ಒದಗಿಸಿದ ಮಾಹಿತಿ/ದಾಖಲೆಗಳ ಪರಿಶೀಲನೆಗೆ ಒಳಪಟ್ಟಿರುತ್ತವೆ. ಯಾವುದೇ ಕಾರಣಕ್ಕಾಗಿ ಈ ಖಾತೆಯನ್ನು ತೆರೆಯಲು ಸಾಧ್ಯವಾಗದಿದ್ದಲ್ಲಿ, ಆರಂಭದಲ್ಲಿ ಖಾತೆಗೆ ಜಮಾ ಮಾಡಲು ನೀಡಿದ ಮೊತ್ತವು ರೂ. 20,000 ಕ್ಕಿಂತ ಹೆಚ್ಚಿದ್ದರೆ, ಅಂತಹ ಮೊತ್ತವನ್ನು DD/ಬ್ಯಾಂಕರ್ಸ್ ಚೆಕ್ ಅಥವಾ PO ರೂಪದಲ್ಲಿ ಮಾತ್ರ ನನಗೆ ಮರುಪಾವತಿಸಲಾಗುತ್ತದೆ.

**ಸೇವೆಗಳು:** ಎಕ್ಸಿಸ್ ಬ್ಯಾಂಕ್ ತನ್ನ ಎಲ್ಲ ಸೇವೆಗಳನ್ನು ಅತ್ಯುತ್ತಮ ಪ್ರಯತ್ನದ ಆಧಾರದಲ್ಲೇ ಒದಗಿಸುತ್ತದೆ. ನನಗೆ ಲಭ್ಯವಿರುವ ಸೇವೆಗಳ ಸಂಪೂರ್ಣ ಪಟ್ಟಿಯು www.axisbank.com ನಲ್ಲಿ ಲಭ್ಯವಿರುತ್ತದೆ. ಹಾಲಿ ಗ್ರಾಹಕರಲ್ಲದಿದ್ದರೆ, ಮುಂದೆ ಹಾಲಿ ಗ್ರಾಹಕರೇ ಎಂದು ಕಂಡುಬಂದಲ್ಲಿ, ನನಗೆ ಯಾವುದೇ ಮುನ್ಸೂಚನೆ ನೀಡದೆ, ಗ್ರಾಹಕ ID ಗಳನ್ನು ಸಂಯೋಜಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ ಎಂದು ನಾನು ದೃಢೀಕರಿಸುತ್ತೇನೆ.

**ಶುಲ್ಕಗಳು ಮತ್ತು ಶುಲ್ಕಗಳು:** ಅತ್ಯಂತ ಪ್ರಮುಖ ದಾಖಲೆ/ಶೆಡ್ಯೂಲ್ ಆಫ್ ಚಾರ್ಜಸ್‌ನಲ್ಲಿ ಮತ್ತು www.axisbank.com ವೆಬ್‌ಸೈಟ್‌ನಲ್ಲಿ ವಿವರಿಸಿದಂತೆ ನನ್ನ ಖಾತೆಗೆ ಮತ್ತು ನಾನು ಪಡೆದ ಇತರ ಸೇವೆಗಳಿಗೆ ಶುಲ್ಕಗಳು ಅನ್ವಯವಾಗುತ್ತವೆ ಮತ್ತು ಎಲ್ಲ ಶುಲ್ಕಗಳ ಮೇಲೆ GST ಹಾಗೂ ಕಾಲಕಾಲಕ್ಕೆ ಅನ್ವಯವಾಗುವ ಇತರ ಶಾಸನಬದ್ಧ ತೆರಿಗೆಗಳನ್ನು ವಿಧಿಸಲಾಗುತ್ತದೆ.

**ಬಡ್ಡಿ ಪಾವತಿ:** ಎಕ್ಸಿಸ್ ಬ್ಯಾಂಕ್ ನಿಮ್ಮ ಉಳಿತಾಯ ಖಾತೆಯಲ್ಲಿರುವ ಮೊತ್ತಕ್ಕೆ ಸ್ಕೀಮ್ ಕೋಡ್‌ನ ಅನುಸಾರ ಅನ್ವಯವಾಗುವ ದರದಲ್ಲಿ ದೈನಂದಿನ ಶಿಲ್ಕಿನ ಆಧಾರದಲ್ಲಿ ಬಡ್ಡಿ ನೀಡುತ್ತದೆ.

**ಶುಲ್ಕಗಳು, ಸೇವೆಗಳು ಮತ್ತು ಬಡ್ಡಿದರದಲ್ಲಿನ ಬದಲಾವಣೆಗಳು:** ಶುಲ್ಕಗಳು, ಸೇವೆಗಳಲ್ಲಿ ಯಾವುದೇ ಬದಲಾವಣೆಗಳಾದರೆ/ ರದ್ದಾದರೆ, ಅವುಗಳ ಕುರಿತು ಕನಿಷ್ಠ 30 ದಿನ ಮುಂಚಿತವಾಗಿ ಪತ್ರ/SMS/ವೆಬ್‌ಸೈಟ್/ಇಮೇಲ್ ಅಥವಾ ಇತರ ವಿಧಾನಗಳ ಮೂಲಕ ನನಗೆ ತಿಳಿಸಲಾಗುವುದು.

**ವಸೂಲಾತಿ:** ಶುಲ್ಕಗಳನ್ನು ಪಾವತಿಸಲು ಖಾತೆಯಲ್ಲಿ ಶಿಲ್ಕು ಲಭ್ಯವಿಲ್ಲದ ಸಂದರ್ಭದಲ್ಲಿ, ಕಲೆಕ್ಷನ್ ಪ್ರಕ್ರಿಯೆಯಿಂದ ಬರುವ ಹಣ ಅಥವಾ ಯಾವುದೇ ಠೇವಣಿಗಳಿಂದ ಖಾತೆಗೆ ಜಮಾ ಆಗುವ ಮೊತ್ತವನ್ನೂ ಒಳಗೊಂಡಂತೆ ಲಭ್ಯವಿರುವ ಯಾವುದೇ ಕ್ರೆಡಿಟ್ ಅನ್ನು ಶುಲ್ಕಗಳ ಮೊತ್ತಕ್ಕೆ ಸರಿಹೊಂದಿಸಲು ಎಕ್ಸಿಸ್ ಬ್ಯಾಂಕ್‌ಗೆ ನಾನು ಅಧಿಕಾರವನ್ನು ನೀಡುತ್ತೇನೆ.

**ಡೆಬಿಟ್ ಮಿತಿ:** ಖಾತೆ ತೆರೆಯುವ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವವರೆಗೆ ಮತ್ತು ಅವುಗಳು ತೃಪ್ತಿಕರವಾಗಿವೆ ಎಂದು ಬ್ಯಾಂಕ್‌ಗೆ ಕಂಡುಬರುವವರೆಗೆ ಖಾತೆಯು 50000 ರೂ. ಡೆಬಿಟ್ ಮಿತಿಯನ್ನು ಹೊಂದಿರುತ್ತದೆ ಎಂಬುದು ನನಗೆ ತಿಳಿದಿದೆ. ಎಕ್ಸಿಸ್ ಬ್ಯಾಂಕ್ ಪ್ರತಿನಿಧಿ ಮೂಲದ ಖಾತೆಗಳ ಸಂದರ್ಭದಲ್ಲಿ, ದಾಖಲೆಗಳನ್ನು ಪರಿಶೀಲಿಸಿದ ಮೇಲಷ್ಟೇ ಡೆಬಿಟ್ ವಹಿವಾಟಿಗಾಗಿ ಖಾತೆಯನ್ನು ಬ್ಯಾಂಕ್ ಸಕ್ರಿಯಗೊಳಿಸಲಾಗುತ್ತದೆ.

**ನಿಷ್ಕ್ರಿಯ ಖಾತೆ:** 2 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಖಾತೆಯಲ್ಲಿ ನನ್ನಿಂದ ಯಾವುದೇ ವಹಿವಾಟುಗಳು ನಡೆಯದಿದ್ದರೆ, ಅದನ್ನು ನಿಷ್ಕ್ರಿಯ ಖಾತೆ ಎಂದು ಪರಿಗಣಿಸಲಾಗುವುದು.

**ಖಾತೆಯನ್ನು ಸ್ಥಗಿತಗೊಳಿಸುವುದು (ಫ್ರೀಜ್):** ನಿರ್ದಿಷ್ಟವಾಗಿ ತಿಳಿಸದ ಹೊರತು, ಈ ಕೆಳಗಿನ ಸಂದರ್ಭಗಳಲ್ಲಿ, ನನಗೆ ಸೂಚನೆ ನೀಡಿ ನನ್ನ ಖಾತೆಯನ್ನು ಸ್ಥಗಿತಗೊಳಿಸಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ. a. ಖಾತೆ ತೆರೆಯಲು ನಾನು ಸಲ್ಲಿಸಿದ ದಾಖಲೆಗಳು ತೃಪ್ತಿಕರವಾಗಿಲ್ಲ ಎಂದು ಕಂಡುಬಂದರೆ b. ಖಾತೆದಾರರಾಗಿರುವ ಅಪ್ರಾಪ್ತರು, ಪ್ರಾಪ್ತ ವಯಸ್ಸನ್ನು ತಲುಪಿದಾಗ c. ನನ್ನ ಖಾತೆಯಲ್ಲಿನ ವಹಿವಾಟುಗಳನ್ನು ನಾನು ಮಾಡಿಲ್ಲ ಎಂದು ಬ್ಯಾಂಕ್ ಶಂಕಿಸಿದರೆ (ವಹಿವಾಟುಗಳನ್ನು ಅದಾಗಲೇ ಕಾರ್ಯಗತಗೊಳಿಸಲಾಗಿದ್ದರೆ, ಅವುಗಳ ಯಾವುದೇ ಹೊಣೆಗಾರಿಕೆಯನ್ನು ಬ್ಯಾಂಕ್ ವಹಿಸಿಕೊಳ್ಳುವುದಿಲ್ಲ). d. ನನ್ನ ಖಾತೆಯನ್ನು ಅಕ್ರಮವಾಗಿ ಸಂಪಾದಿಸಿದ ಹಣದ ವರ್ಗಾವಣೆಗಾಗಿ ಅಥವಾ ಅನಧಿಕೃತ ಹಣ ಸಂಚಯನದ ಮಾಧ್ಯಮವಾಗಿ ಅಥವಾ ಯಾವುದೇ ಕಾನೂನುಬಾಹಿರ ಚಟುವಟಿಕೆಯ ಮಾರ್ಗವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಶಂಕಿಸಿದರೆ. (ಈ ಸಂದರ್ಭದಲ್ಲಿ ನನಗೆ ನೋಟಿಸ್ ಕಳುಹಿಸಲಾಗುವುದಿಲ್ಲ) e. ಖಾತೆ ತೆರೆಯಲು ವಿನಂತಿಯನ್ನು ಫಾರ್ಮ್ 49A ಮತ್ತು/ಅಥವಾ ಆಧಾರ್ ದಾಖಲಾತಿ ಸಂಖ್ಯೆಯೊಂದಿಗೆ ಸಲ್ಲಿಸಿದ್ದರೆ, ತೆರೆಯಲಾದ ಖಾತೆಯ ಪ್ರಕಾರವನ್ನು ಅವಲಂಬಿಸಿ ಅಗತ್ಯವಿರುವ PAN ಮತ್ತು ಆಧಾರ್ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಬ್ಯಾಂಕ್‌ಗೆ ಸಲ್ಲಿಸಬೇಕು.

**ಖಾತೆ ಮುಚ್ಚುವಿಕೆ:** ಈ ಕೆಳಗಿನ ಸಂದರ್ಭಗಳಲ್ಲಿ, ನನಗೆ ಮುಂಚಿತವಾಗಿ ಸೂಚನೆ ನೀಡಿ, ನನ್ನ ಖಾತೆಯನ್ನು ಮುಚ್ಚಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ: a. 3 ತಿಂಗಳು ಅಥವಾ ಇನ್ನೂ ಹೆಚ್ಚಿನ ಅವಧಿಗೆ ನನ್ನ ಖಾತೆಯಲ್ಲಿನ ಶಿಲ್ಕು ಶೂನ್ಯವಾಗಿದ್ದರೆ; b. ನನ್ನ ಖಾತೆಯಿಂದ ಪಾವತಿಗಳು ಅಮಾನ್ಯಗೊಂಡ ಘಟನೆಗಳು ಹೆಚ್ಚಿದ್ದರೆ. c. ವಹಿವಾಟಿನ ಪ್ರಮಾಣ/ಪ್ರಕಾರದ ವಿಷಯದಲ್ಲಿ ಖಾತೆಯ ಅನುಚಿತ ನಿರ್ವಹಣೆ. d. ಖಾತೆಯ ನಿರ್ವಹಣೆ ಅತೃಪ್ತಿಕರವಾಗಿದ್ದರೆ.

**ಖಾತೆ ಪರಿವರ್ತನೆ (ಸಂಬಳ ಉಳಿತಾಯ ಖಾತೆ ಹೊಂದಿರುವವರಿಗೆ ಅನ್ವಯಿಸುತ್ತದೆ):** ನನ್ನ ಸಂಬಳ ಖಾತೆಗೆ 3 ತಿಂಗಳ ಅವಧಿಯವರೆಗೆ ಸಂಬಳವು ಜಮಾ ಆಗದಿದ್ದರೆ, ಯಾವುದೇ ನೋಟಿಸ್ ಅಥವಾ ಸೂಚನೆ ನೀಡದೆ ಖಾತೆಯನ್ನು ಸ್ವಯಂಚಾಲಿತವಾಗಿ ಸಾಮಾನ್ಯ ಉಳಿತಾಯ ಖಾತೆಗೆ ಪರಿವರ್ತಿಸಲಾಗುತ್ತದೆ (ಅನ್ವಯವಾಗುವ ಎಲ್ಲ ಶುಲ್ಕಗಳೊಂದಿಗೆ) ಮತ್ತು ಇದಕ್ಕೆ ಸಂಪೂರ್ಣ KYC ಅನ್ವಯಿಸುತ್ತದೆ, ಹಾಗೆ ಮಾಡಲು ವಿಫಲವಾದಲ್ಲಿ ಖಾತೆಗೆ ಕ್ರೆಡಿಟ್ ಫ್ರೀಜ್ ಹಾಕಲಾಗುತ್ತದೆ.

**ವಹಿವಾಟುಗಳು:** ನಾನು ಖಾತೆಗೆ ಸಂಬಂಧಿಸಿದಂತೆ ಎಕ್ಸಿಸ್ ಬ್ಯಾಂಕ್‌ಗೆ ಹಣಕಾಸಿನ/ಹಣಕಾಸಿನದಲ್ಲದ (ಉದಾ: ಚೆಕ್ ಬುಕ್/ಕಾರ್ಡ್ ವಿತರಣೆ, ಹಣಕಾಸು ವಹಿವಾಟುಗಳು, ವೈಯಕ್ತಿಕ ವಿವರಗಳ ನವೀಕರಣ ಇತ್ಯಾದಿ) ಯಾವುದೇ ಸೂಚನೆಗಳನ್ನು ಆ ಸಮಯದಲ್ಲಿ ಪ್ರಸ್ತುತವಿರುವ ನಿಯಂತ್ರಕ ಮಾರ್ಗಸೂಚಿಗಳ ಆಧಾರದ ಮೇಲೆ ಬ್ಯಾಂಕ್ ನಿರ್ದಿಷ್ಟಪಡಿಸುವ ಅಧಿಕೃತ ಚಾನೆಲ್‌ಗಳ ಮೂಲಕವೇ ಒದಗಿಸುತ್ತೇನೆ. ಅಧಿಕೃತವಲ್ಲದ ಚಾನೆಲ್‌ಗಳ ಮೂಲಕ ಬರುವ ಸೂಚನೆಗಳ ಅನುಸಾರ ಎಕ್ಸಿಸ್ ಬ್ಯಾಂಕ್ ಕಾರ್ಯನಿರ್ವಹಿಸುತ್ತದೆ ಎಂದು ನಿರೀಕ್ಷಿಸಲಾಗುವುದಿಲ್ಲ, ಆದರೆ ವಿಶೇಷ ಸಂದರ್ಭಗಳಲ್ಲಿ ಅಂತಹ ಸೌಲಭ್ಯಗಳನ್ನು ಒದಗಿಸಲು ತನ್ನ ವಿವೇಚನೆಯ ಮೇರೆಗೆ ಕಾರ್ಯನಿರ್ವಹಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

**ಚಾನೆಲ್ ಸೌಲಭ್ಯಗಳು:** ಡೆಬಿಟ್ ಕಾರ್ಡ್‌ಗಳು, ATM ಕಾರ್ಡ್‌ಗಳು, ATMಗಳು, ಇಂಟರ್‌ನೆಟ್ ಬ್ಯಾಂಕಿಂಗ್ ಇತ್ಯಾದಿಗಳನ್ನು ಒಳಗೊಂಡಂತೆ ಎಕ್ಸಿಸ್ ಬ್ಯಾಂಕ್ ಒದಗಿಸುವ ಎಲ್ಲ ಚಾನೆಲ್ ಸೌಲಭ್ಯಗಳು www.axisbank.com ನಲ್ಲಿ ಒದಗಿಸಲಾದ ನಿರ್ದಿಷ್ಟ

ಮಾರ್ಗಸೂಚಿಗಳಿಗೆ ಹಾಗೂ ನನಗೆ ಹಸ್ತಾಂತರಿಸಿರುವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತವೆ. ನನ್ನ/ನಮ್ಮ ಖಾತೆಯ ಯಾವುದೇ ಸೂಕ್ಷ್ಮ ಮಾಹಿತಿಯನ್ನು ವಿಶೇಷವಾಗಿ ಇಂಟರ್‌ನೆಟ್/ಇಮೇಲ್/ಫೋನ್ ಮಾಧ್ಯಮದ ಮೂಲಕ ನಾನು/ನಾವು ಬಹಿರಂಗಪಡಿಸಿದರೆ, ಅಂತಹ ಬಹಿರಂಗಪಡಿಸುವಿಕೆಗಳಿಂದ ಉಂಟಾಗುವ ವಂಚನೆಗೆ ಎಕ್ಸಿಸ್ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ ಎಂದು ನಾನು/ನಾವು ಅರ್ಥಮಾಡಿಕೊಂಡಿದ್ದೇನೆ/ವೆ ಮತ್ತು ಒಪ್ಪಿಕೊಳ್ಳುತ್ತೇನೆ/ವೆ. ನನ್ನ ಖಾತೆಗೆ ಲಿಂಕ್ ಮಾಡಲಾದ ಚೆಕ್ ಹಾಳೆ(ಗಳು), ಕ್ರೆಡಿಟ್/ಡೆಬಿಟ್ ಕಾರ್ಡ್(ಗಳು) ಕಳೆದುಹೋದ ಸಂದರ್ಭದಲ್ಲಿ ತಕ್ಷಣವೇ ಬ್ಯಾಂಕ್‌ಗೆ ತಿಳಿಸಲು ಸಹ ಒಪ್ಪಿಕೊಳ್ಳುತ್ತೇನೆ/ವೆ.

ಡೆಬಿಟ್ ಕಾರ್ಡ್: ಡೆಬಿಟ್ ಕಾರ್ಡ್ ಬಳಕೆಯು ಎಕ್ಸ್‌ಚೇಂಜ್ ಕಂಟ್ರೋಲ್ ರೆಗ್ಯುಲೇಶನ್‌ಗೆ ಅನುಸಾರವಾಗಿರುತ್ತದೆ, ಈ ವಿಷಯದಲ್ಲಿ ಯಾವುದೇ ವೈಫಲ್ಯವು ಸಂಭವಿಸಿದಲ್ಲಿ, ಕಾರ್ಡುದಾರರು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ 1999 ಮತ್ತು ಅದರ ತಿದ್ದುಪಡಿಗಳ ಅಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಕ್ರಮಕ್ಕೆ ಜವಾಬ್ದಾರರಾಗಿರುತ್ತಾರೆ. ಎಕ್ಸಿಸ್ ಬ್ಯಾಂಕ್ ಗಾಗಿ ಹಕ್ಕುತ್ಯಾಗ

**ಇಂಟರ್‌ನೆಟ್ ಬ್ಯಾಂಕಿಂಗ್:** ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸುವುದು ಮತ್ತು ಬಳಸುವುದನ್ನು www.axisbank.com ನಲ್ಲಿ ನಿಗದಿಪಡಿಸಿದಂತೆ ಕಾಲಕಾಲಕ್ಕೆ ಜಾರಿಯಲ್ಲಿರುವ ನಿಯಮಗಳು ಮತ್ತು ಷರತ್ತುಗಳ ಮೂಲಕ ನಿಯಂತ್ರಿಸಲಾಗುತ್ತದೆ ಎಂದು ನಾನು/ನಾವು ಅಂಗೀಕರಿಸುತ್ತೇನೆ/ವೆ ಮತ್ತು ಅದನ್ನು ಪಾಲಿಸಲು ಒಪ್ಪಿಕೊಳ್ಳುತ್ತೇನೆ/ವೆ. ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ ತನ್ನ ಗ್ರಾಹಕರಿಗೆ ಇಮೇಲ್‌ಗಳನ್ನು ಕಳಿಸುವ ಮೂಲಕವೂ ಸೇರಿದಂತೆ ಯಾವುದೇ ರೂಪದಲ್ಲಿ ಲಾಗಿನ್ ID/ಪಾಸ್‌ವರ್ಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕೇಳುವುದಿಲ್ಲ ಎಂದು ನನಗೆ/ನಮಗೆ ತಿಳಿದಿದೆ. ಲಾಗಿನ್ ID, ಪಾಸ್‌ವರ್ಡ್, ಕಾರ್ಡ್, ಕಾರ್ಡ್ ಸಂಖ್ಯೆಗಳು ಅಥವಾ PIN (ವೈಯಕ್ತಿಕ ಗುರುತಿನ ಸಂಖ್ಯೆ)ಗಳನ್ನು ನಾವು ಯಾರೊಂದಿಗೋ ಹಂಚಿಕೊಳ್ಳುವುದು/ಬಹಿರಂಗಪಡಿಸುವುದರಿಂದ ಉಂಟಾಗುವ ಯಾವುದೇ ನಷ್ಟಗಳಿಗೆ ಎಕ್ಸಿಸ್ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ, ಅಥವಾ ಯಾವುದೇ ಅನಧಿಕೃತ ಬಳಕೆಗಾಗಿ ಬ್ಯಾಂಕಿನ ಮೇಲೆ ಕ್ಲೈಮ್‌ಗಳನ್ನು ಮಾಡುವುದಿಲ್ಲ ಎಂದು ನಾನು/ನಾವು ಒಪ್ಪಿಕೊಳ್ಳುತ್ತೇನೆ/ವೆ ಮತ್ತು ದೃಢೀಕರಿಸುತ್ತೇನೆ/ವೆ. ಯಾವುದೇ ಅನಧಿಕೃತ ಬಳಕೆಯನ್ನು ತಪ್ಪಿಸುವ ಸಲುವಾಗಿ, ನನ್ನ/ನಮ್ಮ ಖಾತೆಯ ವಿವರಗಳನ್ನು ರಕ್ಷಿಸಲು ನಾನು/ನಾವು ಎಲ್ಲ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತೇನೆ/ವೆ.

**ವೈಯಕ್ತಿಕ ಮಾಹಿತಿ:** a. ವೈಯಕ್ತಿಕ ಮಾಹಿತಿ, ವಿಳಾಸದಲ್ಲಿನ ಬದಲಾವಣೆ ಸೇರಿದಂತೆ ನನ್ನ ವಿವರಗಳಲ್ಲಿ ಯಾವುದೇ ನವೀಕರಣಗಳಿದ್ದಲ್ಲಿ, ಅವುಗಳನ್ನು ಪುರಾವೆಗಳ ದಾಖಲೆಗಳೊಂದಿಗೆ 2 ವಾರಗಳ ಒಳಗಾಗಿ ನಾನು ಬ್ಯಾಂಕಿಗೆ ಒದಗಿಸುತ್ತೇನೆ. ನಾನು ತಪ್ಪು ಮಾಹಿತಿಯನ್ನು ಒದಗಿಸಿದ ಕಾರಣದಿಂದ ಅಥವಾ ಮಾಹಿತಿಯನ್ನು ನವೀಕರಣ ಮಾಡದಿರುವ ಕಾರಣದಿಂದ, ಈ ಆಧಾರದಲ್ಲಿ ನಾನು ಒದಗಿಸಿದ ಮಾಹಿತಿ ಎಲ್ಲವೂ ಸರಿಯಿದೆ ಮತ್ತು ನಿಜವಾಗಿದೆ ಎಂದು ಭಾವಿಸಿ ಎಕ್ಸಿಸ್ ಬ್ಯಾಂಕ್ ಕಾರ್ಯ ನಿರ್ವಹಿಸುವುದರಿಂದ ನನಗೆ ಅಥವಾ ಎಕ್ಸಿಸ್ ಬ್ಯಾಂಕ್‌ಗೆ ಸಂಭವಿಸುವ ಯಾವುದೇ ವಂಚನೆ, ನಷ್ಟ ಅಥವಾ ಹಾನಿಯ ಪರಿಹಾರವನ್ನು ಎಕ್ಸಿಸ್ ಬ್ಯಾಂಕ್‌ಗೆ ತುಂಬಿಕೊಡಲು ನಾನು ಸಮ್ಮತಿಸುತ್ತೇನೆ. b. ನಾನು ಒದಗಿಸಿದ ಯಾವುದೇ ಸ್ವರೂಪದ (ವೈಯಕ್ತಿಕ ಮತ್ತು ಸೂಕ್ಷ್ಮ ಮಾಹಿತಿಯೂ ಸೇರಿದಂತೆ) ಎಲ್ಲ ಮಾಹಿತಿಯನ್ನು ಕಾನೂನು/ರೂಢಿಗತ ಅಭ್ಯಾಸದ ಪ್ರಕಾರ ಬ್ಯಾಂಕಿಗೆ ಅಗತ್ಯವಿರುವಂತೆ ಸೇವೆಗಳು ಅಥವಾ ಸೌಲಭ್ಯಗಳನ್ನು ಒದಗಿಸಲು, ವಹಿವಾಟುಗಳನ್ನು ಸುಗಮಗೊಳಿಸಲು, ಮಾಹಿತಿ ಮತ್ತು ನವೀಕರಣಗಳನ್ನು ಒದಗಿಸಲು (ಮೌಲ್ಯವರ್ಧಿತ ಸೇವೆಗಳನ್ನು ಒಳಗೊಂಡಂತೆ), ಸಂಶೋಧನೆ ಮತ್ತು ವಿಶ್ಲೇಷಣೆ, ಕ್ರೆಡಿಟ್ ಸ್ಕೋರಿಂಗ್, ಪರಿಶೀಲನೆಗಳಲ್ಲಿ, ಟೆಲಿಕಮ್ಯುನಿಕೇಷನ್ ಅಥವಾ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ನೆಟ್‌ವರ್ಕ್‌ನಲ್ಲಿ ಭಾಗವಹಿಸಲು ಬಳಸಲಾಗುವುದು. c. ನಾನು ಒದಗಿಸಿದ ಯಾವುದೇ ಸ್ವರೂಪದ (ವೈಯಕ್ತಿಕ ಮತ್ತು ಸೂಕ್ಷ್ಮ ಮಾಹಿತಿಯೂ ಸೇರಿದಂತೆ) ಎಲ್ಲ ಮಾಹಿತಿಯನ್ನು ವ್ಯವಹಾರದ ಉದ್ದೇಶಕ್ಕಾಗಿ ಮತ್ತು ತಿಳಿಯುವ ಅಗತ್ಯದ ಆಧಾರದಲ್ಲಿ ಎಕ್ಸಿಸ್ ಬ್ಯಾಂಕ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುವ ಏಜೆನ್ಸಿಗಳು/ಸೇವಾ ಪೂರೈಕೆದಾರರೊಂದಿಗೆ ಹಂಚಿಕೊಳ್ಳಬಹುದು. ಬ್ಯಾಂಕಿನ ಗೌಪ್ಯತಾ ನೀತಿಗೆ ಅನುಗುಣವಾಗಿ ಈ ವಿಷಯದಲ್ಲಿ ಕಾಲಕಾಲಕ್ಕೆ ಅನ್ವಯವಾಗುವ ನಿಯಮಗಳು ಮತ್ತು ನಿಬಂಧನೆಗಳನ್ನು ಅನುಸರಿಸಲು ಎಕ್ಸಿಸ್ ಬ್ಯಾಂಕ್ ಯಾವಾಗಲೂ ಪ್ರಯತ್ನಿಸುತ್ತದೆ. ಡೇಟಾ ಹಂಚಿಕೆಗೆ ನಾನು ನೀಡಿದ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳಲು ನಾನು ಬಯಸಿದರೆ, ಈ ಮೊದಲು ನೀಡಿದ ಒಪ್ಪಿಗೆಯ ಪ್ರಕಾರ, ನನಗೆ ಲಭ್ಯವಿರುವ ಉತ್ಪನ್ನಗಳು/ಸೇವೆಗಳು ಇನ್ನು ಮುಂದೆ ಲಭ್ಯವಾಗುವುದಿಲ್ಲ ಮತ್ತು ಅಂತಹ ಉತ್ಪನ್ನಗಳು/ಸೇವೆಗಳನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಯನ್ನು ನಾನು

ಪ್ರಾರಂಭಿಸಬೇಕಾಗುತ್ತದೆ. d. ಕಾನೂನು, ನಿಯಮ ಅಥವಾ ನಿಬಂಧನೆಗಳಿಗೆ ಅಗತ್ಯವಿದ್ದರೆ ಅಥವಾ ಅವುಗಳು ಅನುಮತಿಸಿದರೆ, ಅಥವಾ ಯಾವುದೇ ಸಾರ್ವಜನಿಕ ಅಥವಾ ನಿಯಂತ್ರಕ ಪ್ರಾಧಿಕಾರದ ಕೋರಿಕೆಯ ಮೇರೆಗೆ, ಅಥವಾ ವಂಚನೆಗಳನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿಗಾಗಿ ಮಾಹಿತಿ ಬಹಿರಂಗಪಡಿಸುವ ಅಗತ್ಯವಿದ್ದರೆ, ಖಾತೆದಾರನ/ರ ನಿರ್ದಿಷ್ಟ ಒಪ್ಪಿಗೆಯಿಲ್ಲದೆ ಬ್ಯಾಂಕ್ ಗ್ರಾಹಕರ ಖಾತೆಯ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸಬಹುದು. ಜಂಟಿ ಖಾತೆದಾರರ ಮೊಬೈಲ್ ಸಂಖ್ಯೆಗಳನ್ನು ಒದಗಿಸಿದಲ್ಲೆಲ್ಲ, ಅವರು ATM, ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಲ್ಲಿ (ಅನ್ವಯವಾಗುವಂತೆ) ಪ್ರಾರಂಭಿಸಿದ ವಹಿವಾಟುಗಳಿಗಾಗಿ ಆ ಮೊಬೈಲ್ ಸಂಖ್ಯೆಗಳಲ್ಲಿ ಒನ್ ಟೈಮ್ ಪಾಸ್‌ವರ್ಡ್ (OTP) ಮತ್ತು ವಹಿವಾಟಿನ ಅಲರ್ಟ್‌ಗಳನ್ನು ಸ್ವೀಕರಿಸುತ್ತಾರೆ. ಆಧಾರ್: ಆಧಾರ್ ಆಧಾರಿತ ದೃಢೀಕರಣ ವ್ಯವಸ್ಥೆಯೊಂದಿಗೆ ನನ್ನನ್ನು ದೃಢೀಕರಿಸಲು ನಾನು ಆಕ್ಷೇಪಿಸುವುದಿಲ್ಲ ಮತ್ತು ಎಕ್ಸಿಸ್ ಬ್ಯಾಂಕ್‌ನಿಂದ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುವ ಉದ್ದೇಶಕ್ಕಾಗಿ ಆಧಾರ್ ಆಧಾರಿತ ದೃಢೀಕರಣಕ್ಕಾಗಿ ನನ್ನ ಆಧಾರ್ ಸಂಖ್ಯೆ, ಬಯೋಮೆಟ್ರಿಕ್ ಮತ್ತು/ಅಥವಾ ಒನ್ ಟೈಮ್ ಪಿನ್ (OTP) ಡೇಟಾವನ್ನು (ಮತ್ತು/ಅಥವಾ ಅದೇ ರೀತಿಯ ಯಾವುದೇ ದೃಢೀಕರಣ ಕಾರ್ಯವಿಧಾನ) ಒದಗಿಸಲು ಒಪ್ಪಿಗೆ ಇದೆ ಎಂದು ನಾನು ಈ ಮೂಲಕ ತಿಳಿಸುತ್ತೇನೆ, ದೃಢೀಕರಣಕ್ಕಾಗಿ ನಾನು ಒದಗಿಸಬಹುದಾದ ಬಯೋಮೆಟ್ರಿಕ್ಸ್ ಮತ್ತು/ಅಥವಾ OTP ಮತ್ತು/ಅಥವಾ ಇತರ ಯಾವುದೇ ದೃಢೀಕರಣ ಕಾರ್ಯವಿಧಾನವನ್ನು ಆಧಾರ್ ದೃಢೀಕರಣ ವ್ಯವಸ್ಥೆಯ ಮೂಲಕ ನನ್ನ ಗುರುತನ್ನು ದೃಢೀಕರಿಸುವ ಸಲುವಾಗಿ UIDAI ನಿಂದ eKYC ಪಡೆಯಲು ಆ ನಿರ್ದಿಷ್ಟ ವಹಿವಾಟಿಗಾಗಿ ಮಾತ್ರ ಬಳಸಲಾಗುತ್ತದೆ ಮತ್ತು ಇತರ ಯಾವುದೇ ಉದ್ದೇಶಗಳಿಗಾಗಿ ಬಳಸಲಾಗುವುದಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಆಧಾರ್ ಆಧಾರಿತ ದೃಢೀಕರಣದ ಉದ್ದೇಶಕ್ಕಾಗಿ ಒದಗಿಸಲಾದ ನನ್ನ ವೈಯಕ್ತಿಕ ಗುರುತಿನ ಡೇಟಾದ ಭದ್ರತೆ ಮತ್ತು ಗೌಪ್ಯತೆಯನ್ನು ಎಕ್ಸಿಸ್ ಬ್ಯಾಂಕ್ ಖಚಿತಪಡಿಸುತ್ತದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಅರ್ಹತೆ ಹೊಂದಿರುವ ಎಲ್ಲ ಯೋಜನೆಗಳಲ್ಲಿ ಸರ್ಕಾರದಿಂದ ಪಾವತಿಗಳನ್ನು ಸ್ವೀಕರಿಸುವ ಸಲುವಾಗಿ ಆಧಾರ್ ಆಧಾರಿತ ದೃಢೀಕರಣವನ್ನು ಬಳಸಿಕೊಂಡು ಆಧಾರ್‌ದೊಂದಿಗೆ ಲಿಂಕ್ ಮಾಡಿರುವ ನನ್ನ ಬ್ಯಾಂಕ್ ಖಾತೆಯನ್ನು ಬಳಸಲು ಬ್ಯಾಂಕ್‌ಗೆ ನಾನು ಅಧಿಕಾರ ನೀಡುತ್ತೇನೆ. ಕಾನೂನುಬದ್ಧ ವ್ಯವಹಾರದ ಉದ್ದೇಶಗಳಿಗಾಗಿ ನನ್ನ ಅರ್ಜಿಯನ್ನು ಪ್ರಕ್ರಿಯೆಗೊಳಿಸುವ ಸಂದರ್ಭದಲ್ಲಿ ನನ್ನ ಆಧಾರ್ ಸಂಖ್ಯೆಯನ್ನು ಪರಿಶೀಲಿಸಲು ಮತ್ತು ದೃಢೀಕರಿಸಲು ಎಕ್ಸಿಸ್ ಬ್ಯಾಂಕ್‌ಗೆ ನಾನು ಅಧಿಕಾರ ನೀಡುತ್ತೇನೆ. ಅಷ್ಟೇ ಅಲ್ಲದೆ, ನನ್ನ ಆಧಾರ್ ಸಂಬಂಧಿತ ವಿವರಗಳು/ಮಾಹಿತಿಯನ್ನು, ಅಗತ್ಯವಿದ್ದ ಸಂದರ್ಭದಲ್ಲಿ ನಿಯಂತ್ರಕ/ಶಾಸನಬದ್ಧ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ. ನನ್ನ ಖಾತೆಯಲ್ಲಿ ನವೀಕರಣಕ್ಕಾಗಿ ಆಧಾರ್ ಸಂಖ್ಯೆಯನ್ನು ಕೇಳಿದಾಗ, ಅದನ್ನು ಬ್ಯಾಂಕ್‌ಗೆ ಸಲ್ಲಿಸಲು ನಾನು ಬದ್ಧನಾಗಿರುತ್ತೇನೆ. ಆಧಾರ್ ಸಲ್ಲಿಸುವುದು ಕಡ್ಡಾಯವಾಗಿದೆ ಮತ್ತು ಖಾತೆ ತೆರೆದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಆಧಾರ್ ಸಂಖ್ಯೆಯನ್ನು ಸಲ್ಲಿಸಲು ನಾನು ವಿಫಲವಾದರೆ ನನ್ನ ಖಾತೆಯಲ್ಲಿನ ಕಾರ್ಯಾಚರಣೆಗಳನ್ನು ಬ್ಯಾಂಕ್ ಸ್ಥಗಿತಗೊಳಿಸುತ್ತದೆ ಎಂದು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಮೇಲಿನ ಘೋಷಣೆಗಾಗಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ಮಾಡಬೇಕಾದ ಕಾರ್ಯವನ್ನು ಮಾಡದಿರುವುದರಿಂದ ಬ್ಯಾಂಕ್ ಅನುಭವಿಸಿದ ಮತ್ತು/ಅಥವಾ ಬ್ಯಾಂಕ್‌ಗೆ ಉಂಟಾದ ಎಲ್ಲ ವೆಚ್ಚಗಳು, ಶುಲ್ಕಗಳು, ಹಾನಿಗಳು, ದಂಡಗಳಿಂದ ಬ್ಯಾಂಕ್‌ಗೆ ಸಂಭವಿಸಿದ ನಷ್ಟವನ್ನು ತುಂಬಿಕೊಡಲು ಮತ್ತು ಭವಿಷ್ಯದಲ್ಲೂ ತುಂಬಿಕೊಡಲು ನಾನು ಒಪ್ಪುತ್ತೇನೆ.

**ಇನ್‌ಸ್ಟಾ A/C ಘೋಷಣೆ:** "ನಾನು ವೆಲ್‌ಕಮ್ ಕಿಟ್‌ನಲ್ಲಿ ಡೆಬಿಟ್ ಕಾರ್ಡ್ ಮತ್ತು ಚೆಕ್ ಬುಕ್ ಅನ್ನು ಸ್ವೀಕರಿಸಿದ್ದೇನೆ ಎಂದು ನಾನು ದೃಢೀಕರಿಸುತ್ತೇನೆ. ಉಳಿತಾಯ/ಚಾಲ್ತಿ ಖಾತೆಯನ್ನು ತೆರೆಯಲು ನಾನು ಎಕ್ಸಿಸ್ ಬ್ಯಾಂಕ್ ಅನ್ನು ಸಂಪರ್ಕಿಸಿದ್ದೇನೆ. ಖಾತೆಯನ್ನು ಸಕ್ರಿಯಗೊಳಿಸಿದ ನಂತರ ಮತ್ತು ಈ ನಿಟ್ಟಿನಲ್ಲಿ ನಾನು ಸೂಚನೆಯನ್ನು ಸ್ವೀಕರಿಸಿದ ಬಳಿಕವೇ ಆ ಖಾತೆಯನ್ನು ನಿರ್ವಹಿಸಬೇಕು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಅಷ್ಟೇ ಅಲ್ಲದೆ, ಇದರ ಯಾವುದೇ ಉಲ್ಲಂಘನೆಯು ನನ್ನ ಕಡೆಯಿಂದ ಆಗುವ ಕರ್ತವ್ಯಲೋಪದ ಘಟನೆಯನ್ನು ರೂಪಿಸುತ್ತದೆ ಮತ್ತು ಅಂತಹ ಕರ್ತವ್ಯಲೋಪದ ಘಟನೆ ಜರುಗಿದಲ್ಲಿ, ಬ್ಯಾಂಕ್ ಯಾವುದೇ ಕಾರಣವನ್ನು ನೀಡದೇ ಈ ಖಾತೆಯನ್ನು ತಕ್ಷಣವೇ ಮುಚ್ಚುವ ಹಕ್ಕನ್ನು ಕಾಯ್ದಿರಿಸುತ್ತದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ವೆಲ್‌ಕಮ್ ಕಿಟ್‌ನ ವಿತರಣೆ ಮತ್ತು/ಅಥವಾ ಸ್ವೀಕೃತಿಯಾಗಿದೆ ಎಂದ ಮಾತ್ರಕ್ಕೆ ಎಕ್ಸಿಸ್ ಬ್ಯಾಂಕ್ ಖಾತೆಯನ್ನು ತೆರೆದಿದೆ ಅಥವಾ ತೆರೆಯಲು ಒಪ್ಪಿಗೆ ಸೂಚಿಸಿದೆ ಎಂದು ಅರ್ಥೈಸಲಾಗುವುದಿಲ್ಲ ಎಂದು ನನಗೆ ತಿಳಿದಿದೆ. ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ ತನ್ನ ಸ್ವಂತ ವಿವೇಚನೆಯಿಂದ, ಹೆಚ್ಚಿನ ದಾಖಲೆಗಳಿಗಾಗಿ ಕರೆ ಮಾಡಬಹುದು ಅಥವಾ ಯಾವುದೇ ಕಾರಣಕ್ಕಾಗಿ ಅರ್ಜಿಯನ್ನು ತಿರಸ್ಕರಿಸಬಹುದು. ಅರ್ಜಿಯು ತಿರಸ್ಕೃತವಾದರೆ, ವೆಲ್‌ಕಮ್ ಕಿಟ್ ಮತ್ತು ಪತ್ರವನ್ನು ಹಿಂತೆಗೆದುಕೊಂಡಂತೆ ಎಂದು

ಪರಿಗಣಿಸಲಾಗುವುದು ಎಂದು ನನಗೆ ತಿಳಿದಿದೆ ಮತ್ತು ಅದನ್ನು ಬ್ಯಾಂಕ್‌ಗೆ ಹಿಂತಿರುಗಿಸಲು ನಾನು ಒಪ್ಪಿಕೊಳ್ಳುತ್ತೇನೆ. ಖಾತೆ ಸಕ್ರಿಯಗೊಂಡ ನಂತರವೇ ನಾನು ಚೆಕ್‌ಗಳನ್ನು ನೀಡುತ್ತೇನೆ ಮತ್ತು ನನ್ನ ಖಾತೆಯು ಸಕ್ರಿಯಗೊಳ್ಳುವ ಮೊದಲೇ ನಾನು ಯಾವುದೇ ಚೆಕ್ ಅನ್ನು ನೀಡಿದರೆ, ಅಂತಹ ಘಟನೆಯಿಂದ ಬ್ಯಾಂಕ್‌ಗೆ ಯಾವುದೇ ವೆಚ್ಚ, ಪರಿಣಾಮಗಳು, ಖರ್ಚು ಇತ್ಯಾದಿಗಳಿಂದ ಹಾನಿಯಾಗದಂತೆ ನೋಡಿಕೊಳ್ಳುತ್ತೇನೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಒಂದು ವೇಳೆ ನೀವು ನಿಮ್ಮ ಖಾತೆಗೆ ನಗದನ್ನು ಜಮಾ ಮಾಡಲು ಬಯಸಿದರೆ, ದಯವಿಟ್ಟು ಶಾಖೆಗೆ ಭೇಟಿ ನೀಡಿ. ಮಾರಾಟ ಸಿಬ್ಬಂದಿ ಅಥವಾ ಇನ್ನಾವುದೇ ಬ್ಯಾಂಕ್ ಪ್ರತಿನಿಧಿಗೆ ನಗದನ್ನು ಹಸ್ತಾಂತರಿಸಬೇಡಿ. ನಾನು ಒದಗಿಸಿದ ಮಾಹಿತಿಯು ನವೀಕೃತವಾಗಿದೆ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ ಮತ್ತು ನನ್ನ ಇತ್ತೀಚಿನ ಛಾಯಾಚಿತ್ರ ಮತ್ತು KYC ದಾಖಲೆಗಳ ಛಾಯಾಚಿತ್ರಗಳನ್ನು ನಾನು ಈ ಮೂಲಕ ಸಲ್ಲಿಸುತ್ತೇನೆ. ಅನ್ವಯವಾಗುವ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಬ್ಯಾಂಕಿನ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸಲಾಗುವುದು ಎಂಬುದು ನನಗೆ ತಿಳಿದಿದೆ. ನಿಯಮಗಳು ಮತ್ತು ನಿಬಂಧನೆಗಳ ಪ್ರತಿಯನ್ನು ನಾನು ಸ್ವೀಕರಿಸಿದ್ದೇನೆ ಮತ್ತು ಅರ್ಜಿ ಹಾಗೂ ನಾಮನಿರ್ದೇಶನ ನಮೂನೆಯನ್ನು ಸಲ್ಲಿಸಿದ್ದಕ್ಕಾಗಿ ಬ್ಯಾಂಕ್‌ನಿಂದ ಸ್ವೀಕೃತಿಯನ್ನು ಪಡೆದಿದ್ದೇನೆ.

**ಗ್ರಾಹಕರ ಸೀಮಿತ ಹೊಣೆಗಾರಿಕೆ** - a. ನನ್ನ/ನಮ್ಮ ನಿರ್ಲಕ್ಷ್ಯದ ಕಾರಣದಿಂದ ನಷ್ಟ ಉಂಟಾದ ಸಂದರ್ಭಗಳಲ್ಲಿ, ಉದಾಹರಣೆಗೆ: ನಾನು/ನಾವು ಪಾವತಿ ಕ್ರೆಡೆನ್ಶಿಯಲ್‌ಗಳನ್ನು ಹಂಚಿಕೊಂಡು ನಾನು/ನಾವು ಅನಧಿಕೃತ ವಹಿವಾಟನ್ನು ಬ್ಯಾಂಕ್‌ಗೆ ವರದಿ ಮಾಡುವವರೆಗೆ, ಅನಧಿಕೃತ ವಹಿವಾಟುಗಳಿಂದ ಸಂಭವಿಸುವ ಸಂಪೂರ್ಣ ನಷ್ಟಕ್ಕೆ ನಾನೇ/ನಾವೇ ಜವಾಬ್ದಾರರಾಗಿರುತ್ತೇನೆ/ವೆ. ಅನಧಿಕೃತ ವಹಿವಾಟನ್ನು ವರದಿ ಮಾಡಿದ ನಂತರ ಸಂಭವಿಸುವ ಯಾವುದೇ ನಷ್ಟವನ್ನು ಬ್ಯಾಂಕ್ ಭರಿಸುತ್ತದೆ. b. ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟಿನ ಜವಾಬ್ದಾರಿಯು ಬ್ಯಾಂಕ್ ಬಳಿಯೂ ಇರದೆ, ನನ್ನ/ನಮ್ಮ ಬಳಿಯೂ ಇರದೆ, ವ್ಯವಸ್ಥೆಯ ಬೇರೆಡೆಯಲ್ಲಿ ಇರುವ ಸಂದರ್ಭಗಳಲ್ಲಿ, ಅಂತಹ ವಹಿವಾಟನ್ನು ಬ್ಯಾಂಕ್‌ಗೆ ತಿಳಿಸುವಲ್ಲಿ ಗ್ರಾಹಕರಿಂದ ವಿಳಂಬವಾದಾಗ (ಬ್ಯಾಂಕ್‌ನಿಂದ ಸೂಚನೆಯನ್ನು ಸ್ವೀಕರಿಸಿದ ನಾಲ್ಕರಿಂದ ಏಳು ಕೆಲಸದ ದಿನಗಳು), ನನಗೆ/ನಮಗೆ ಪ್ರತಿ ವಹಿವಾಟಿನ ಹೊಣೆಗಾರಿಕೆಯು, ವಹಿವಾಟಿನ ಮೌಲ್ಯ ಅಥವಾ ಆಯಾ ಮಾರ್ಗಸೂಚಿಯ ಅಡಿಯಲ್ಲಿ ವ್ಯಾಖ್ಯಾನಿಸಲಾದ ಗ್ರಾಹಕರ ಗರಿಷ್ಠ ಹೊಣೆಗಾರಿಕೆ ಎಂದು ನಮೂದಿಸಲಾದ ಮೊತ್ತ, ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸೀಮಿತವಾಗಿರುತ್ತದೆ.

**ಒನ್ ಅಸಿಸ್ಟ್ ಡಿಕ್ಲೇರೇಶನ್:** ಒನ್ ಅಸಿಸ್ಟ್ ಪ್ಲಾನ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನಾನು ಆಸಕ್ತಿ ಹೊಂದಿದ್ದೇನೆ ಮತ್ತು ಎಕ್ಸಿಸ್ ಬ್ಯಾಂಕ್ ಮತ್ತು/ಅಥವಾ ಅದರ ಪ್ರತಿನಿಧಿ ಅಥವಾ ಅವರ ಏಜೆಂಟರು ಅಥವಾ ಒನ್ ಅಸಿಸ್ಟ್ ಕನ್‌ಸ್ಯೂಮರ್ ಸೊಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಅಥವಾ ಒನ್ ಅಸಿಸ್ಟ್‌ಗೆ ಸಂಬಂಧಿಸಿದ ಯಾವುದೇ ಮೂರನೇ ವ್ಯಕ್ತಿಗೆ ನನ್ನನ್ನು ಸಂಪರ್ಕಿಸಲು ಒಪ್ಪಿಗೆಯನ್ನು ನೀಡುತ್ತೇನೆ. ಒನ್ ಅಸಿಸ್ಟ್ ಎನ್ನುವುದು ಒನ್ ಅಸಿಸ್ಟ್ ಕನ್‌ಸ್ಯೂಮರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ನೀಡಿರುವ ಕೊಡುಗೆಯಾಗಿದೆ ಮತ್ತು ಈ ನಮೂನೆಯಲ್ಲಿ ಒಳಗೊಂಡಿರುವ ವಿವರಗಳನ್ನು ಒನ್ ಅಸಿಸ್ಟ್ ಕನ್‌ಸ್ಯೂಮರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು /ಅಥವಾ ಒನ್ ಅಸಿಸ್ಟ್ ಕನ್‌ಸ್ಯೂಮರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನ ಜೊತೆಗೆ ಎಕ್ಸಿಸ್ ಬ್ಯಾಂಕ್ ಮಾಡಿಕೊಂಡಿರುವ ವ್ಯವಸ್ಥೆಗೆ ಅನುಸಾರವಾಗಿ ಯಾವುದೇ ಇತರ ಮೂರನೇ ವ್ಯಕ್ತಿಯೊಂದಿಗೆ ಅಗತ್ಯವಿರುವಂತೆ ಅಥವಾ ಎಕ್ಸಿಸ್ ಬ್ಯಾಂಕ್ ಸೂಕ್ತವೆಂದು ಪರಿಗಣಿಸುವಂತೆ ಹಂಚಿಕೊಳ್ಳಬಹುದು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಒನ್ ಅಸಿಸ್ಟ್‌ನಲ್ಲಿನ ಮಾಹಿತಿಗೆ ಸಂಬಂಧಿಸಿದಂತೆ ನನ್ನನ್ನು ಸಂಪರ್ಕಿಸಲು, ಈ ಒಪ್ಪಿಗೆಯನ್ನು ನಾನು ಮಾಡಿರಬಹುದಾದ ಯಾವುದೇ DNC ನೋಂದಣಿಯ ನಿರ್ದಿಷ್ಟ ಮನ್ನಾ ಎಂದು ಪರಿಗಣಿಸಲಾಗುತ್ತದೆ. Y________N______ *ಇದು ಗ್ರಾಹಕರಿಗೆ ಸಂವಹನವನ್ನು ಒದಗಿಸುವ ಸಲುವಾಗಿ 90 ದಿನಗಳವರೆಗೆ DNC ಮನ್ನಾವನ್ನು ರದ್ದುಗೊಳಿಸುತ್ತದೆ

**FATCA-CRS ನಿಯಮಗಳು ಮತ್ತು ಷರತ್ತುಗಳು:** ಆದಾಯ ತೆರಿಗೆ ನಿಯಮಗಳು, 1962ರ ಭಾಗವಾಗಿ ಕೇಂದ್ರೀಯ ನೇರ ತೆರಿಗೆ ಮಂಡಳಿಯು ಆಗಸ್ಟ್ 7, 2015ರಂದು 114F ರಿಂದ 114H ನಿಯಮಗಳನ್ನು ಸೂಚಿಸಿದ್ದು, ಈ ನಿಯಮಗಳಿಗಾಗಿ ಬ್ಯಾಂಕ್‌ನಂತಹ ಭಾರತೀಯ ಹಣಕಾಸು ಸಂಸ್ಥೆಗಳು ಹೆಚ್ಚುವರಿ ವೈಯಕ್ತಿಕ, ತೆರಿಗೆ ಮತ್ತು ಫಲಾನುಭವಿ ಮಾಲೀಕರ ಮಾಹಿತಿ ಮತ್ತು ನಮ್ಮ ಎಲ್ಲ ಖಾತೆದಾರರಿಂದ ಕೆಲವು ಪ್ರಮಾಣೀಕರಣಗಳು ಮತ್ತು ದಾಖಲಾತಿಗಳನ್ನು ಪಡೆಯಬೇಕಾಗುತ್ತದೆ. ಅಗತ್ಯವಿರುವ ಸಂದರ್ಭಗಳಲ್ಲಿ, ಖಾತೆಯಿಂದ ಹಣ ರವಾನೆಯ ಸಮರ್ಪಕ ತಡೆಹಿಡಿಯುವಿಕೆ ಅಥವಾ ಅದಕ್ಕೆ ಸಂಬಂಧಿಸಿದ

ಯಾವುದೇ ಆದಾಯವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ತೆರಿಗೆ ಪ್ರಾಧಿಕಾರಗಳು/ನೇಮಕಗೊಂಡ ಏಜೆನ್ಸಿಗಳು/ವಿತ್‌ಹೋಲ್ಡಿಂಗ್ ಏಜೆಂಟ್‌ಗಳಿಗೆ ಮಾಹಿತಿಯನ್ನು ವರದಿ ಮಾಡಬೇಕಾಗುತ್ತದೆ. ನೀವು ಒದಗಿಸಿದ ಯಾವುದೇ ಮಾಹಿತಿಯಲ್ಲಿ ಯಾವುದೇ ಬದಲಾವಣೆಗಳಿದ್ದರೆ, ದಯವಿಟ್ಟು ನೀವು ನಮಗೆ ತಕ್ಷಣವೇ, ಅಂದರೆ 30 ದಿನಗಳ ಒಳಗಾಗಿ ತಿಳಿಸುವುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಟ್ಯಾಕ್ಸ್ ರೆಸಿಡೆನ್ಸಿ ಬಗ್ಗೆ ನಿಮ್ಮಲ್ಲಿ ಯಾವುದಾದರೂ ಪ್ರಶ್ನೆಗಳಿದ್ದಲ್ಲಿ, ದಯವಿಟ್ಟು ನಿಮ್ಮ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ನೀವು US ನಾಗರಿಕ ಅಥವಾ ನಿವಾಸಿ ಅಥವಾ ಗ್ರೀನ್ ಕಾರ್ಡ್ ಹೊಂದಿದವರಾಗಿದ್ದರೆ, ದಯವಿಟ್ಟು ನಿಮ್ಮ US ಟ್ಯಾಕ್ಸ್ ಐಡೆಂಟಿಫಿಕೇಶನ್ ನಂಬರ್(TIN)ನೊಂದಿಗೆ ವಿದೇಶದ ಮಾಹಿತಿ ಜಾಗದಲ್ಲಿ US ಅನ್ನು ಸೇರಿಸಿ. ನೀವು ಟ್ಯಾಕ್ಸ್ ರೆಸಿಡೆಂಟ್ ಆಗಿರುವ ದೇಶವು ಅಂತಹ ಗುರುತಿನ ಸಂಖ್ಯೆಗಳನ್ನು ನೀಡುತ್ತಿದ್ದರೆ, TIN ಅಥವಾ ಅಧಿಕೃತವಾಗಿ ಅದಕ್ಕೆ ಸಮಾನವಾದ ದಾಖಲೆಯನ್ನು ಸಲ್ಲಿಸುವುದು ಕಡ್ಡಾಯವಾಗಿದೆ. TIN ಇನ್ನೂ ಲಭ್ಯವಿಲ್ಲದಿದ್ದಲ್ಲಿ ಅಥವಾ ಇನ್ನೂ ನೀಡಲಾಗಿಲ್ಲ ಎಂದಾದಲ್ಲಿ, ದಯವಿಟ್ಟು ಸೂಕ್ತ ವಿವರಣೆಯನ್ನು ಒದಗಿಸಿ ಮತ್ತು ಅದನ್ನು ಅರ್ಜಿ ನಮೂನೆಗೆ ಲಗತ್ತಿಸಿ. CKYC ಘೋಷಣೆ. ನನ್ನ ವೈಯಕ್ತಿಕ/KYC ವಿವರಗಳನ್ನು ಸೆಂಟ್ರಲ್ KYC ರಿಜಿಸ್ಟ್ರಿಯೊಂದಿಗೆ ಹಂಚಿಕೊಳ್ಳಬಹುದು. ಮೇಲೆ ತಿಳಿಸಿದ ನೋಂದಾಯಿತ ದೂರವಾಣಿ ಸಂಖ್ಯೆ/ಇಮೇಲ್ ವಿಳಾಸದಲ್ಲಿ SMS/ಇಮೇಲ್ ಮೂಲಕ ಸೆಂಟ್ರಲ್ KYC ರಿಜಿಸ್ಟ್ರಿಯಿಂದ ಮಾಹಿತಿಯನ್ನು ಸ್ವೀಕರಿಸಲು ನಾನು ಈ ಮೂಲಕ ಸಮ್ಮತಿಸುತ್ತೇನೆ.

RBI ಮಾರ್ಗಸೂಚಿಗಳ ಪ್ರಕಾರ ನನ್ನ ಒಂದು ಗ್ರಾಹಕ ID ಯನ್ನು ಉಳಿಸಿಕೊಂಡು, ಉಳಿಸಿಕೊಂಡಿರುವ ಆ ಗ್ರಾಹಕ ID ಗೆ ನನ್ನ ಎಲ್ಲ ಸಕ್ರಿಯ ವ್ಯವಹಾರಗಳನ್ನು ಲಿಂಕ್ ಮಾಡಲು ಮತ್ತು ನಾನು ಹೊಂದಿರುವ ಇತರ ಗ್ರಾಹಕ ID ಗಳನ್ನು ಅಮಾನತುಗೊಳಿಸಲು ಬ್ಯಾಂಕ್‌ಗೆ ನಾನು/ನಾವು ಅಧಿಕಾರ ನೀಡುತ್ತೇನೆ/ವೆ. ಎಲ್ಲ ಬ್ಯಾಂಕಿಂಗ್ ವ್ಯವಹಾರಗಳಿಗಾಗಿ AOF ನಲ್ಲಿ ಉಲ್ಲೇಖಿಸಲಾದ ನನ್ನ ಇತ್ತೀಚಿನ ವೈಯಕ್ತಿಕ ವಿವರಗಳನ್ನು, ಅಂದರೆ ಮೊಬೈಲ್ ಸಂಖ್ಯೆ, ಇಮೇಲ್ ID ಮತ್ತು ಹೊಸ ಸಹಿಯೂ ಸೇರಿದಂತೆ ವಿಳಾಸವನ್ನು ಚಾಲ್ತಿಯಲ್ಲಿರುವ CIF ID ಯಲ್ಲಿ ನವೀಕರಿಸಲು ನಾನು/ನಾವು ಒಪ್ಪಿಕೊಳ್ಳುತ್ತೇನೆ/ವೆ. ಫ್ಲಿಪ್‌ಕಾರ್ಟ್ ಕ್ರೆಡಿಟ್ ಕಾರ್ಡ್ ಜೊತೆಗೆ ಲಿಬರ್ಟಿ ಸೇವಿಂಗ್ಸ್ ಖಾತೆಗೆ ಅರ್ಜಿ ಸಲ್ಲಿಸಿದ ಗ್ರಾಹಕರು, ಫ್ಲಿಪ್‌ಕಾರ್ಟ್ ಕ್ರೆಡಿಟ್ ಕಾರ್ಡ್ ಖಾತೆಯನ್ನು ತೆರೆಯುವುದಕ್ಕಿಂತ 20 ದಿನ ಮೊದಲು ಅಥವಾ 20 ದಿನಗಳ ನಂತರ ಲಿಬರ್ಟಿ ಸೇವಿಂಗ್ ಖಾತೆಯನ್ನು ತೆರೆದಿದ್ದರೆ, ಫ್ಲಿಪ್‌ಕಾರ್ಟ್ ಕ್ರೆಡಿಟ್ ಕಾರ್ಡ್‌ನಲ್ಲಿ ಶುಲ್ಕ ಮನ್ನಾಕ್ಕೆ ಸೇರಲು ಅರ್ಹರಾಗಿರುತ್ತಾರೆ. ಶುಲ್ಕ ಮನ್ನಾ ಸೇರ್ಪಡೆಯನ್ನು ಕ್ರೆಡಿಟ್ ಕಾರ್ಡ್ ಖಾತೆ ತೆರೆದ ದಿನಾಂಕದಿಂದ 45 ದಿನಗಳಲ್ಲಿ ಫ್ಲಿಪ್‌ಕಾರ್ಟ್ ಕ್ರೆಡಿಟ್ ಕಾರ್ಡ್‌ನಲ್ಲಿ ಪ್ರಕ್ರಿಯೆಗೊಳಿಸಲಾಗುತ್ತದೆ ಮತ್ತು ಸಕ್ರಿಯ ಲಿಬರ್ಟಿ ಸೇವಿಂಗ್ಸ್ ಖಾತೆ ಇರುವ ಎಲ್ಲ ಅರ್ಹ ಕಾರ್ಡ್‌ಗಳಿಗೆ ಮುಂಬರುವ ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಇದು ಪ್ರತಿಫಲಿಸುತ್ತದೆ. ಮೇಲಿನ ವಿಷಯಗಳು ಬ್ಯಾಂಕಿನ ವಿವೇಚನೆಯ ಪ್ರಕಾರ ಬದಲಾವಣೆಗಳಿಗೆ ಒಳಪಟ್ಟಿರುತ್ತದೆ ಎಂದು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ. ಭವಿಷ್ಯದಲ್ಲಿ ನಾನು/ನಾವು ಒದಗಿಸಿದ ಯಾವುದೇ ಮಾಹಿತಿ ಅಥವಾ ದಾಖಲೆಗಳಲ್ಲಿನ ಯಾವುದೇ ನವೀಕರಣ/ಬದಲಾವಣೆಯನ್ನು ಬ್ಯಾಂಕ್‌ಗೆ ತಕ್ಷಣವೇ, ಅಂದರೆ ಬದಲಾವಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸೂಚಿಸಲಾಗುವುದು/ತಿಳಿಸಲಾಗುವುದು ಎಂದು ನಾನು/ನಾವು ಖಚಿತಪಡಿಸುತ್ತೇನೆ/ವೆ. ನನ್ನ/ನಮ್ಮ ವೈಯಕ್ತಿಕ/ಸಂಪರ್ಕ ವಿವರಗಳ ಮಾಹಿತಿಯನ್ನು, ಯಾವುದೇ ಇತರ ಬ್ಯಾಂಕುಗಳು/ಹಣಕಾಸು ಸಂಸ್ಥೆ/ಇತರ ಸಂಬಂಧಪಟ್ಟ ಪ್ರಾಧಿಕಾರಗಳು ಯಾವುದೇ ನಿರ್ದಿಷ್ಟ ಅವಶ್ಯಕತೆಯ ಉದ್ದೇಶಗಳಿಗಾಗಿ ವಿನಂತಿಸಿದಾಗ, ಅವುಗಳೊಂದಿಗೆ ಹಂಚಿಕೊಳ್ಳಲು ಅಥವಾ ಬಹಿರಂಗಪಡಿಸಲು ಬ್ಯಾಂಕ್ ಈ ಮೂಲಕ ಅಧಿಕಾರವನ್ನು ಹೊಂದಿದೆ ಎಂದು ನಾನು/ನಾವು ಒಪ್ಪುತ್ತೇನೆ/ವೆ ಮತ್ತು ಅಂಗೀಕರಿಸುತ್ತೇನೆ/ವೆ. ಖಾತೆ ತೆರೆಯುವ ಸಮಯದಲ್ಲಿ ಖಾತೆ ತೆರೆಯುವ ನಮೂನೆಯಲ್ಲಿ ತಿಳಿಸಲಾದಂತೆ ಸಂಬಳದ ಖಾತೆಯೊಂದಿಗೆ ಮರುಪಾವತಿ ಖಾತೆಯನ್ನು (SBERA) ತೆರೆಯಲು ನಾನು ಈ ಮೂಲಕ ಎಕ್ಸಿಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ.